ದಿನಾಂಕ 16-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರಿಂದಃ-

ನನ್ನ ತಂದೆ ಯಾವಾಗ ಮೃತರಾದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಯಾವಾಗ ಮೃತರಾದರು ಎಂದು ಗೊತ್ತಿಲ್ಲ. ನಾನು ಶುಶ್ರೂಷಕಿಯಾಗಿ ಕೆಲಸ ಮಾಡುತ್ತೇನೆ. ನನ್ನ ತಂದೆ ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದರು. ಬಾಳೆಲೆ ಹೋಬಳಿ ನಿಟ್ಟೂರು ಗ್ರಾಮದಲ್ಲಿ ಪೈಸಾರಿ ಜಾಗವನ್ನು ಮಂಜೂರು ಮಾಡಲು ನನ್ನ ತಂದೆ ಅರ್ಜಿ ಕೊಟ್ಟಿದ್ದರು ಎಂದರೆ ನಿಜ. ನನ್ನ ತಂದೆಗೆ ಯುದ್ಧದ ಅನುದಾನವನ್ನು ಕೊಟ್ಟಿದ್ದರು ಎಂದರೆ ನಿಜ. ಮೋಟಯ್ಯನವರ ಪತ್ನಿ ಜಾನ್ಸಿಯವರು ಸರ್ವೆ ನಂ.81/80 ರಲ್ಲಿ 3 ಎಕರೆಯನ್ನು ಒತ್ತುವರಿ ಮಾಡಿದ್ದು ಅದನ್ನು ಸರ್ಕಾರ ಅವರಿಗೆ ಮಂಜೂರು ಮಾಡಿದೆ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ಮಂಜೂರಿ ಆಧಾರದ ಮೇಲೆ ಸದರಿ ಆಸ್ತಿಯ ಖಾತೆಯನ್ನು ಜಾನ್ಸಿಯವರ ಹೆಸರಿಗೆ ವರ್ಗಾವಣೆ ಮಾಡಿ ಕೊಟ್ಟರು ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸರ್ಕಾರದವರು ಜಾನ್ಸಿಯವರಿಗೆ ಪಟ್ಟಾ ಪುಸ್ತಕವನ್ನು ಕೊಟ್ಟಿದ್ದು ಅವರು ಅದರಲ್ಲಿ ಕಾಫಿ ಕೃಷಿ ಮಾಡಿ ಸಿ ಆರ್ ಸಿ ಯನ್ನೂ ಸಹ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ತಂದೆ ಕುಟ್ಟಪ್ಪನವರ ಆಸ್ತಿ ಅಲ್ಲ ಜಾನ್ಸಿಯವರ ಆಸ್ತಿ ಎಂದರೆ ಸರಿಯಲ್ಲ. ನನಗೆ ಸುಬ್ಬಯ್ಯ, ಮೋಟಯ್ಯ, ಸೋಮಯ್ಯ, ಜಯ ಮತ್ತು ಲಲಿತ ಎಂಬ ಸಹೋದರ ಸಹೋದರಿಯರು ಇದ್ದಾರೆ ಎಂದರೆ ನಿಜ.

ನನ್ನ ತಂದೆಗೆ ಮಂಜೂರಾದ ಆಸ್ತಿಯನ್ನು ನನ್ನ ತಂದೆಯೇ ಅವರ ಜೀವಿತ ಕಾಲದಲ್ಲಿ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ನನ್ನ ತಂದೆ ದಿನಾಂಕ 28-02-1982 ರಲ್ಲಿ ಮೃತರಾದರು ಎಂದರೆ ನಿಜ. ನನ್ನ ತಂದೆ ಮೃತರಾದ ನಂತರ ನನ್ನ ನಾಲ್ಕು ಸಹೋದರರು ಮತ್ತು ತಾಯಿ ಬಾಯಿ ಮಾತಿನಲ್ಲಿ ಮಂಜೂರಾದ ಆಸ್ತಿಗಳನ್ನು ವಿಭಾಗ ಮಾಡಿಕೊಂಡರು ಎಂದರೆ ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬಾಯಿ ಮಾತಿನ ಆಧಾರದ ಮೇಲೆ ಮೋಟಯ್ಯ, ಸುಬ್ಬಯ್ಯ ಮತ್ತು ಜಯರವರಿಗೆ ನಿಟ್ಟೂರು ಗ್ರಾಮದ ಆಸ್ತಿಯನ್ನು ಸ್ವಾಧೀನವಾಗಿ ಕೊಟ್ಟರು ಎಂದರೆ ಗೊತ್ತಿಲ್ಲ. ಸದರಿ ವಿಭಾಗವನ್ನು ದಿನಾಂಕ 21-05-1994 ರಂದು ಬರವಣಿಗೆ ಮೂಲಕ ಮಾಡಿಕೊಂಡರು ಎಂದರೆ ಗೊತ್ತಿಲ್ಲ.

ನಾನು ನನ್ನ ತಾಯಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ತಾಯಿಯ ಸಹಿಯನ್ನು ತೋರಿಸಿದಾಗ ಅದು ನನ್ನ ತಾಯಿಯ ಸಹಿಯಲ್ಲ ಎಂದು ಹೇಳಿರುತ್ತಾರೆ ಆದಕಾರಣ ಆ

ದಾಖಲೆಯನ್ನು ಗುರುತಿಸಿಲ್ಲ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸುಬ್ಬಯ್ಯನವರ ಪತ್ನಿಯ ಸಹಿಯನ್ನು ಅವರು ಒಪ್ಪದ ಕಾರಣ ಅದನ್ನು ಗುರುತಿಸಿಲ್ಲ. ನನಗೆ ಅವರ ಸಹಿಗಳು ಗೊತ್ತಿದ್ದರೂ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಐಟಂ ನಂ.2 ರಲ್ಲಿ 1 ವರೆ ಎಕರೆ ಜಮೀನನ್ನು ಮೋಟಯ್ಯನವರಿಗೆ ಮತ್ತು 1 ವರೆ ಎಕರೆ ಜಮೀನನ್ನು ಸುಬ್ಬಯ್ಯನವರ ಪತ್ನಿ ಮತ್ತು ಅವರ ಮಕ್ಕಳಿಗೂ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕ 28-05-1994 ರಲ್ಲಿ ಪಾಲುದಾರಿಕೆಯ ಆಧಾರದ ಮೇಲೆ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.1 ಮತ್ತು 2 ಆಸ್ತಿ ಜಾನ್ಸಿಯವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನಗೆ ಆ ಆಸ್ತಿಗಳ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಐಟಂ ನಂ.3 ರಲ್ಲಿ 1 ವರೆ ಎಕರೆ ಜಮೀನು ಬಾಯಿ ಮಾತಿನ ಪಾಲಿನಲ್ಲಿ ಮೋಟಯ್ಯನವರಿಗೆ ಹಂಚಿಕೆಯಾಯಿತು ಎಂದರೆ ಗೊತ್ತಿಲ್ಲ.

ಐಟಂ ನಂ.4 ನನ್ನ ತಂದೆಗೆ ಸರ್ಕಾರದವರು ಯುದ್ಧದಲ್ಲಿ ಮಂಜೂರು ಮಾಡಿದ ಆಸ್ತಿ ಎಂದರೆ ನಿಜ. ಸದರಿ ಆಸ್ತಿಯನ್ನು ನನ್ನ ತಂದೆ ನನ್ನ ತಾಯಿಗೆ ಕೊಟ್ಟಿದ್ದರು ಎಂದರೆ ಇಲ್ಲ. ನನ್ನ ತಾಯಿ ಡಿಸಿ ಯವರಿಗೆ ಐಟಂ ನಂ.4 ಆಸ್ತಿಯನ್ನು ಮಾರಾಟ ಮಾಡಲು ಅನುಮತಿಗಾಗಿ ಅರ್ಜಿ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನನ್ನ ತಾಯಿ ದಿಃ 11-10-1994 ರಲ್ಲಿ ಜಾನ್ಸಿಯವರಿಗೆ ಅರ್ಜಿ ವಿಚಾರಣೆಯಲ್ಲಿದ್ದಾಗ ಆಸ್ತಿಯನ್ನು ಮಾರಾಟ ಮಾಡಿದರು ಎಂದರೆ ಸರಿಯಲ್ಲ. ಡಿಸಿಯವರು ಅನುಮತಿಯನ್ನೂ ಸಹ ಕೊಟ್ಟರು ಎಂದರೆ ಗೊತ್ತಿಲ್ಲ.

ಐಟಂ ನಂ.5 ರ ಆಸ್ತಿ 2 ನೇ ಪ್ರತಿವಾದಿಗೆ ಹಂಚಿಕೆಯಾದ ಆಸ್ತಿ ಎಂದರೆ ಗೊತ್ತಿಲ್ಲ. ಐಟಂ ನಂ.6 ರ ಆಸ್ತಿಯೂ ಸಹ 2 ನೇ ಪ್ರತಿವಾದಿಗೆ ಹಂಚಿಕೆಯಾದ ಆಸ್ತಿ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನನಗೆ ಗೊತ್ತಿಲ್ಲದ ಹಾಗೆ ದಾವಾ ಆಸ್ತಿಗಳಲ್ಲಿ ಭಾಗ ಮಾಡಿಕೊಂಡಿದ್ದಾರೆ ಅದರಲ್ಲಿ 6 ಭಾಗ ಆಗಬೇಕು ನನಗೂ ಭಾಗ ಬೇಕು. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆ 50 ಸಾವಿರ ರೂ. ಬೆಲೆ ಬಾಳುವ ಒಡವೆಗಳನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

1996 ನೇ ಇಸವಿಯಲ್ಲಿ ನಾನು ಕಾನೂರು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆನು.

ಓಎಸ್. 98/2014
ಪಿಡಬ್ಲ್ಯೂ-1

ಸಾಕ್ಷಿಗೆ ಒಂದು ಕ್ರಯಪತ್ರವನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿದ್ದಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು, ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ನಿಡಿ-1 ರಂತಿರುವ ಆಸ್ತಿ ನನ್ನ ತಾಯಿಯ ಆಸ್ತಿ ಎಂದು ಗೊತ್ತಿದ್ದರೂ ಸಹ ನಾನು ನನ್ನ ತಂದೆಯ ಆಸ್ತಿ ಎಂದು ದಾವೆ ಹಾಕಿದ್ದೇನೆ ಎಂದರೆ ಸಾಕ್ಷಿಯು ಅದು ನನ್ನ ತಂದೆಯ ಆಸ್ತಿ ಎನ್ನುತ್ತಾರೆ.

ಬಿ ಶೆಡ್ಯೂಲ್ ಆಸ್ತಿ ತೀತೀರ ಕುಟುಂಬದಲ್ಲಿ ನನ್ನ ತಂದೆಗೆ ಹಕ್ಕಾಗಿ ಬಂದ ಆಸ್ತಿ. ತೀತೀರ ಕಾವೇರಪ್ಪನವರ ಮಗ ರಾಜ ಪೂಣಚ್ಚ, ಸುನಿಲ್ ಗೊತ್ತು. ಅವರು ದಾವೆ ಹಾಕಿರುವ ವಿಷಯ ನನಗೆ ಗೊತ್ತಿಲ್ಲ. ಅವರು ಐಟಂ ನಂ.1, 3, 4 ಮತ್ತು 5 ರ ಮೇಲೆ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದು ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಈಗಾಗಲೇ ಪಾಲಾಗಿದ್ದು ಪ್ರತಿವಾದಿಯರು ಅದನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಆಸ್ತಿಯನ್ನು ಅಭಿವೃದ್ದಿ ಮಾಡಿ ಸಾಲದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.
ಸಹಿಃ
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)